ಸ್ನೇಹಿತರು

✍️ಶ್ರೀವಲ್ಲಿ ರೈ ಮಾರ್ಟೆಲ್



ಒಂದು ಏಡಿ ಸಮುದ್ರದ ದಡದಲ್ಲಿ ನಡೆದುಕೊಂಡು ಹೋಗುತ್ತಿತ್ತು. ತಾನು ಬಂದ ದಾರಿಯನ್ನು ಹಿಂತಿರುಗಿ ನೋಡಿದಾಗ, ಒದ್ದೆಯಾದ ಮರಳಿನ ಮೇಲೆ ಮೂಡಿದ್ದ ತನ್ನ ಕಾಲುಗಳ ಹೆಜ್ಜೆಗುರುತುಗಳು ರಂಗೋಲಿ ಬಿಡಿಸಿದಂತೆ ಕಾಣುತ್ತಿರುವುದನ್ನು ಕಂಡು ಅದಕ್ಕೆ ಭಾರಿ ಖುಷಿಯಾಯಿತು.

ಅಷ್ಟರಲ್ಲೇ ಬಂದ ಸಮುದ್ರದ ಒಂದು ದೊಡ್ಡ ಅಲೆ ಏಡಿಯ ಹೆಜ್ಜೆಗುರುತುಗಳನ್ನೆಲ್ಲ ಸಂಪೂರ್ಣವಾಗಿ ಅಳಿಸಿಹಾಕಿತು. ಇದರಿಂದ ಏಡಿಗೆ ತುಂಬಾ ಬೇಜಾರಾಗಿ ಸಮುದ್ರವನ್ನು ಕೇಳಿತು:

"ನೀನು ಮತ್ತು ನಾನು ಇಷ್ಟೊಂದು ಒಳ್ಳೆಯ ಸ್ನೇಹಿತರು, ಆದರೂ ನೀನು ನನ್ನ ಅಂದವಾದ ಹೆಜ್ಜೆಗುರುತುಗಳನ್ನು ಅಳಿಸಿಬಿಟ್ಟೆಯಲ್ಲ, ಇದು ಯಾವ ನ್ಯಾಯ?"

ಅದಕ್ಕೆ ಸಮುದ್ರವು ಏಡಿಗೆ ಹೀಗೆ ಹೇಳಿತು: "ನಾನು ನಿನ್ನ ಹೆಜ್ಜೆಯನ್ನು ಅಳಿಸಿದ್ದನ್ನು ಮಾತ್ರ ನೀನು ನೋಡಿದೆ, ಆದರೆ ಆ ಹೆಜ್ಜೆಗುರುತಿನ ಹಿಂದೆ ಯಾರು ಇದ್ದಾರೆ ಎಂದು ನೋಡು. ಸ್ವಲ್ಪ ದೂರದಲ್ಲಿ ಒಂದು ಕಡಲ ಹಕ್ಕಿ ನಿನ್ನನ್ನು ತಿನ್ನಲು ನಿನ್ನ ಹೆಜ್ಜೆಯ ಗುರುತನ್ನು ಹಿಡಿದುಕೊಂಡು ನಿನ್ನ ಹಿಂದೆಯೇ ಬರುತ್ತಿದೆ. ಆ ಹಕ್ಕಿಗೆ ನಿನ್ನ ಹೆಜ್ಜೆಗುರುತು ಸಿಗಬಾರದು ಎಂದು ನಾನು ಅದನ್ನು ಅಳಿಸಿಹಾಕಿದೆ. ಇಲ್ಲದಿದ್ದರೆ ನಿನ್ನ ಜೀವಕ್ಕೇ ಅಪಾಯವಿತ್ತು."

ಬದುಕಿನ ಪಾಠ

ಅದೇ ರೀತಿ ನಮ್ಮ ಜೀವನದಲ್ಲೂ ಕೆಲವು ಬಾರಿ ಇಂತಹ ಸಂದರ್ಭಗಳು ಬರುತ್ತವೆ. ನಮ್ಮ ಸಂಬಂಧಿಕರು, ಆಪ್ತರು ಅಥವಾ ಹಿತೈಷಿಗಳು ನಮ್ಮೊಂದಿಗೆ ನಡೆದುಕೊಳ್ಳುವ ರೀತಿಯನ್ನು ನೋಡಿ ನಮ್ಮ ಮನಸ್ಸಿಗೆ ಬೇಸರವಾಗುತ್ತದೆ. ಆದರೆ ವಾಸ್ತವದಲ್ಲಿ ಅವರು ನಮ್ಮ ಒಳಿತನ್ನೇ ಬಯಸುತ್ತಿದ್ದರೂ, ಆ ಸಮಯದಲ್ಲಿ ನಮ್ಮ ಬುದ್ಧಿಗೆ ಅದು ಹೊಳೆಯುವುದಿಲ್ಲ.